## ಪತ್ತರ್ ಕಾ ಪುತ್ತರ್

ನಮ್ಮ ಮಾವ ಗುಜರಾತಿನಲ್ಲಿ ಸೇನೆಯಲ್ಲಿ ಎಂಜಿನಿಯರ್. ಅವರಾಗ ಗುಜರಾತಿನಲ್ಲಿದ್ದರು. ತುಂಬಾ ಸ್ನೇಹಜೀವಿ. ಎಲ್ಲೇ ಹೋದರೂ ಸ್ನೇಹಿತರು, ಬಂಧು–ಬಳಗವನ್ನು ಹಚ್ಚಿಕೊಳ್ಳುತ್ತಾರೆ. ಗುಜರಾತಿನಲ್ಲಿಯೂ ಸಾಕಷ್ಟು ಜನ ಸ್ನೇಹಿತರು, ಸಹೋದ್ಯೋಗಿಗಳು ಆಗಾಗ ಮನೆಗೆ ಭೇಟಿ ಕೊಡುವುದಿತ್ತು. ಅವರ ಅಡ್ಡ ಹೆಸರು ಪತ್ತಾರ್. ಆದರೆ ಬೇರೆ ಬೇರೆ ಭಾಷೆಯನ್ನಾಡುವ ಜನರ ಬಾಯಿಯಲ್ಲಿ ಅದು ಬೇರೆ ಬೇರೆ ರೀತಿಯಲ್ಲಿ ಕೇಳಿಬರುವುದಿದೆ. ಒಮ್ಮೆ ಅವರ ಪಂಜಾಬಿ ಸ್ನೇಹಿತರೊಬ್ಬರು ಇತರ ಸ್ನೇಹಿತರೊಂದಿಗೆ ಮನೆಗೆ ಬಂದರು. ಮಾವನವರ ಮೂರು ವರ್ಷದ ಮಗ ಮನೆಯ ಹೊರಗೆ ಆಟವಾಡುತ್ತಿದ್ದ. ಆಗ ಆ ಪಂಜಾಬಿ ಮಿತ್ರರು ತಮ್ಮ ಜೊತೆಗಿದ್ದವರಿಗೆ



ಅವನನ್ನು ತೋರಿಸುತ್ತ, 'ದೇಕೊ, ಏ ಲಡಕಾ ಪತ್ತರ್ ಕಾ ಪುತ್ತರ್' ಎಂದಾಗ ನಮ್ಮ ಅತ್ತೆ ಮಾವ ನಕ್ಕು ಸುಸ್ತಾದರು.

**ಸಿಂಧು ಬಿ.ಎಸ್.**

## ಗಂಡುಮಕ್ಕಳಿಲ್ಲೇನ್ರಿ?

ನಮ್ಮ ಮದುವೆ ಆದ ಹೊಸತು. ನಾವಿಬ್ಬರೂ ಹಳೇ ಮೈಸೂರು ಭಾಗದವರು. ಆದರೆ ಕೆಲಸ ನಿಮಿತ್ತ ಉತ್ತರ ಕರ್ನಾಟಕಕ್ಕೆ ಹೋಗಿ ಒಂದೂವರೆ ವರ್ಷವಾಗಿತ್ತು. ನನಗೆ ಅಲ್ಲಿನ



ಭಾಷಾ ಪ್ರಭೇದ ಸ್ವಲ್ಪ ಸ್ವಲ್ಪ ಅರಿವಿಗೆ ಬಂದಿತ್ತು. ನನ್ನವಳಿಗೆ ಇದು ಪೂರ್ತಿ ಹೊಸದು. ಒಮ್ಮೆ ನಾನು ಕೆಲಸ ಮಾಡುತ್ತಿದ್ದ ಮಹಿಳಾ ಗ್ರಾಹಕರೊಬ್ಬರು ನಮ್ಮ ಮನೆಗೆ ಬಂದು ನನ್ನನ್ನು ಕೂಗಿದರು. ಹೋಗಿ ಯಾರೆಂದು ನೋಡುವಂತೆ ನನ್ನಾಕೆಗೆ ತಿಳಿಸಿದೆ. ನನ್ನಾಕೆ ಹೊರಗೆ ಹೋಗಿ ಏನು ಎಂದು ಕೇಳಿದಾಗ ಆಕೆ 'ಗಂಡುಮಕ್ಕಳು ಇಲ್ಲೇನ್ರಿ?' ಎಂದು ಕೇಳಿದ್ದಾಳೆ. ಆಗ ಇವಳು 'ನಮಗಿನ್ನೂ ಮಕ್ಕಳಾಗಿಲ್ಲ' ಎನ್ನಬೇಕೇ. ಅವಳ ಮಾತು ಕೇಳಿ ನನಗೆ ನಗು ತಡೆಯಲಾಗದೆ ಹೊರಗೆ ಓಡಿ ಬಂದೆ. ಉತ್ತರ ಕರ್ನಾಟಕದಲ್ಲಿ ಮನೆಯ ಯಜಮಾನ ಅಥವಾ ಗಂಡಸರನ್ನು ಗಂಡುಮಕ್ಕಳು ಎನ್ನುತ್ತಾರೆ. ಈಗಲೂ ನಾನು, ಮಕ್ಕಳೂ ಅವಳನ್ನು ಗೋಳು ಹೊಯ್ದುಕೊಳ್ಳುತ್ತೇವೆ.

**ಗಿರೀಶ ಪುತ್ರಾಯ**

ಚಿತ್ರಗಳು: ಗಣೇಶ ಆಚಾರ್ಯ